ಕರ್ನಾಟಕ ಸರಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ/ಕಂ/ಪಹಣಿ/ವಿವಾದ/45/2014-15 ದಿನಾಂಕ 26/05/2016

ಉಪಸ್ಥಿತರು:- ಹೆಚ್. ವಿಶ್ವನಾಥ್ , ಹೂವಿನಹಡಗಲಿ.

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| 3) ಶ್ರೀ ಮಲ್ಲಾ ಮಹಮದ್ ಅಲಿ ತಂದೆ ಗೌಸ್ ಮೊಹಿದ್ದಿನ್, ಹೂವಿನಹಡಗಲಿ<br>4) ಶ್ರೀ ಹೆಚ್ ಬಸವನಗೌಡ ತಂದೆ ಗದ್ದಿಕೇರಿ ಗೌಡ್ರಸಿದ್ದಲಿಂಗಪ್ಪ 1ನೇ ವಾರ್ಡ ಪಾಂಡುರಂಗ ದೇವಸ್ಥಾನ ಹತ್ತಿರ ಹೂವಿನಹಡಗಲಿ | ಶ್ರೀ ಮುಲ್ಲಾ ಹಬೀಬ್ ಸಾಬ್ ತಂದೆ ಮುಕ್ತುಂಸಾಬ್ ಬಿದ್ದುಗತ್ತಿ ಓಣಿ ಹೂವಿನಹಡಗಲಿ<br>(ಶ್ರೀ ಎಸ್ ಎಸ್ ಹೆಚ್, ವಕೀಲರು, ಹೂವಿನಹಡಗಲಿ) |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ | ವಿಸ್ತೀರ್ಣ(ಎಕರೆ.ಸೆಂಟ್ಸ್) |
|---|---|---|
| ಹೂವಿನಹಡಗಲಿ | 309 A/2 A/1a | 0.07 |

ಪ್ರಸ್ತಾವನೆ:-

ಮೇಲಿನ ದಾವಾ ಜಮೀನನ್ನು ವಾದಿಯು ಕ್ರಯ ಪತ್ರ ಸಂಖ್ಯೆ 2325/2014-15 ದಿನಾಂಕ 03/11/2014 ರಂತೆ ಮುಲ್ಲಾ ಮಹಮ್ಮದ್ ಆಲಿ ತಂದೆ ಗೌಸ್ ಮೋಹಿದ್ದಿನ್ ಹಡಗಲಿ ರವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಈ ಹಿನ್ನಲೆಯಲ್ಲಿ ನೊಂದಣಿ ಜೆ ನಮೂನೆ ಪ್ರಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಾಲ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮಲೆಕ್ಕಾದಿಕಾರಿಗಳು ಹಡಗಲಿ ರವರು ನಮೂನೆ 21ನ್ನು ಜಾರಿಮಾಡಿದಾಗ ದಿನಾಂಕ 26.11.2014ರಂದು ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿ ರವರು ಹಕ್ಕು ಬದಲಾವಣೆ ಹೆಚ್ 50/2014-2015 ದಿನಾಂಕ 08/11/2014ರ ಪ್ರಕಾರ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದು 1964 ಕಲಂ129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಠಿಯಿಂದ ವಾದಿ ಹಾಗೂ ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ 09/01/2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಯಾದ ಶ್ರೀ ಹೆಚ್ ಬಸವನಗೌಡ ತಂದೆ ಗದ್ದಿಕೇರಿ ಗೌಡ್ರಸಿದ್ದಲಿಂಗಪ್ಪ ಹೂವಿನಹಡಗಲಿ ರವರು ಹೂವಿನಹಡಗಲಿ ಗ್ರಾಮದ ಸರ್ವೇ ನಂಬರ 309 A/2 A/1a (ಪಿ) 0.07 ಎಕರೆ ಜಮೀನನ್ನು ಮಲ್ಲಾ ಮಹಮದ್ ಅಲಿ ತಂದೆ ಗೌಸ್ ಮೊಹಿದ್ದಿನ್ ಹೂವಿನಹಡಗಲಿ ರವರಿಂದ ಉಪನೊಂದಾಣಾಧಿಕಾರಿಗಳ ಹಡಗಲಿ ರವರಲ್ಲಿ ನೂಂದಣಿ ದಸ್ತಾವೇಜು ಸಂಖ್ಯೆ 2325/2014-15 ದಿನಾಂಕ 03/11/2014ರಲ್ಲಿ ಖರೀದಿ ಕ್ರಯಕ್ಕೆ ಪಡೆದಿರುತ್ತೇನೆ, ಎಂದು ತಿಳಿಸಿ ಅದರಂತೆ ತನ್ನ ಹೆಸರಿಗೆ ಪಹಣಿಯಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿ ತಮ್ಮ ವಾದವನ್ನು ತಿಳಿಸಿರುತ್ತಾರೆ

ಪ್ರತಿವಾದಿಗಳು ಅವರ ಪರ ನ್ಯಾಯವಾದಿಗಳು ಈ ವಿವಾದಿತ ಜಮೀನಿನಲ್ಲಿ ವಾದಿಗಳ ಮನವಿಯನ್ನು ವಜಾಗೊಳಿಸಬೇಕು, ಈ ಜಮೀನುಗಳು ಮನೆತನದ ಆಸ್ತಿಗಳಾಗಿದ್ದು ಪಾಲುವಿಭಾಗ ಆಗಿರುವುದಿಲ್ಲ ಮಾನ್ಯ ಸಹಾಯಕ ಆಯುಕ್ತರು ಹೊಸಪೇಟೆ ಇವರು ನೊಂದಣಿಯಾಗದ ಪಾಲುವಿಭಾಗ ಪತ್ರವನ್ನು ಗೈರು ಮಂಜೂರು ಮಾಡಿರುತ್ತಾರೆ. ಈ ಜಮೀನು ಮಾನ್ಯ ಸಿವಿಲ್ ನ್ಯಾಯಾಲಯ

ಹಡಗಲಿಯಲ್ಲಿ ದಾವಾ ವಿಚಾರಣೆಯಲ್ಲಿದ್ದು ಈಗ ಅರ್ಜಿದಾರರು ಹೆಸರಿಗೆ ಕ್ರಯ ನೊಂದಣಿ ಪ್ರಕಾರ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿ ಲಿಖಿತ ವಾದ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳ ಮುಲ್ಲಾ ಅಮೀನಸಾಬ್ ತಂದೆ ಮುಕ್ತುಂಸಾಬ್ ಇವರು ಅರ್ಜಿದಾರರಾದ ಮುಲ್ಲಾ ಮಹಮದ್ ಅಲಿ ತಂದೆ ಗೌಸಮೋದಿನ್ ಸುಳ್ಳು ದಾಖಲೆ ಸಲ್ಲಿಸಿ ಅರ್ಜಿಕೊಟ್ಟಿರುತ್ತಾರೆ ಈ ಮುಂಚೆ ಹಡಗಲಿ ಸಿವಿಲ್ ಜಡ್ಜ್ ಕೋರ್ಟನಲ್ಲಿ ಓ ಎಸ್ ನಂಬರ್ 75/2001 ಮುಲ್ಲಾ ಅಬೀಬ್‌ಸಾಬ್ ಮತ್ತು ದಾದಾಪೀರ ಇವರ ಅರ್ಜಿಯನ್ನು ವಜಾಮಾಡಿರುತ್ತಾರೆ ಹಾಗೂ ಹಾಲಿ ಓ ಎಸ್ ನಂಬರ್ 45/2004 ಮಾನ್ಯ ಸಿವಿಲ್ ಜೆ.ಎಂ.ಎಫ್.ಸಿ ನ್ಯಾಯಾಲಯ ಹಡಗಲಿರವರಲ್ಲಿ ವಿಚಾರಣೆ ನಡೆಯುತ್ತಿದ್ದು ಮುಲ್ಲಾ ಮಹಮದ್ ಅಲಿ ತಂದೆ ಗೌಸಮೋಹಿದ್ದಿನ್ ರವರಿಗೆ ಈ ಜಮೀನನ್ನು ಹಕ್ಕು ಬದಲಾವಣೆ ಮಾಡದಂತೆ ಅರ್ಜಿಯನ್ನು ತಿರಸ್ಕರಿಸಲು ಕೋರಿರುತ್ತಾರೆ

ವಾದಿಗಳಾದ ಶ್ರೀ ಹೆಚ್ ಬಸವನಗೌಡ ತಂದೆ ಗದ್ದಿಕೇರಿ ಗೌಡ್ರಸಿದ್ದಲಿಂಗಪ್ಪ ರವರು ಹಡಗಲಿ ಗ್ರಾಮ ಸರ್ವೇ ನಂಬರ 309 A/2 A/1a (ಏ) 0.07 ಸೆಂಟ್ಸ ಜಮೀನನ್ನು ಮುಲ್ಲಾ ಮಹಮದ್ ಅಲ್ಲಿ ತಂದೆ ಗೌಸ್ ಮೋದಿನ ರವರ ಹೆಸರಿಗೆ ಪಹಣಿ ಪಟ್ಟಾ ಇದ್ದು ಕಾನೂನಿನ ಪ್ರಕಾರ ನೊಂದಣಿ ಸಂಖ್ಯೆ 2325/2014-15 ದಿನಾಂಕ 03/11/2014ರಂದು ಉಪನೊಂದಣಿ ಕಛೇರಿ ಹಡಗಲಿಯಲ್ಲಿ ರೂ 56000/- ಗಳಿಗೆ ಖರೀದಿ ಮಾಡಿ ನೊಂದಣಿ ಮಾಡಿಸಿಕೊಂಡಿರುತ್ತೇನೆ ನೊಂದಣಿ ಖರೀದಿ ಪತ್ರ ಪ್ರಕಾರ ತಕರಾರುದಾರ ಆಷೇಪಣೆಯನ್ನು ತಿರಸ್ಕರಿಸಿ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಕೋರಿ ವಾದ ಮಂಡಿಸಿರುತ್ತಾರೆ.

ಈ ಪ್ರಕರಣದಲ್ಲಿ ವಾದಿಗಳ/ಪ್ರತಿವಾದಿಗಳ ಹಾಗೂ ಅವರ ಪರ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು. ಪ್ರತಿವಾದಿಗಳು ಮುಲ್ಲಾ ಮಹಮದ್ ಅಲಿ ತಂದೆ ಗೌಸ್ ಮೋಹಿದಿನ್ ರವರು ನೀಡಿರುವ ಮನವಿಯನ್ನು ತಿರಸ್ಕರಿಸಲು ಹಾಗೂ ವಾದಿ ಮತ್ತು ಕ್ರಯದಾರರುಆದ ಶ್ರೀ ಹೆಚ್ ಬಸವನಗೌಡ ತಂದೆ ಗದ್ದಿಕೇರಿ ಗೌಡ್ರಸಿದ್ದಲಿಂಗಪ್ಪ ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ಹಾಗೂ ಓ ಎಸ್ ನಂಬರ್ 45/2014 ಮಾನ್ಯ ಸಿವಿಲ್ ನ್ಯಾಯಲಯ ಜೆ ಎಂ ಎಫ್ ಜಿ ಹಡಗಲಿ ರವರಲ್ಲಿ ವಾದೆ ಬಾಕಿಯಿರುವ ಪ್ರಯುಕ್ತ ನೊಂದಣಿ ಪತ್ರವನ್ನು ತಿರಸ್ಕರಿಸಲು ಕೋರಿರುವುದು ಸಮಂಜಸ ಆಗಿರುವುದಿಲ್ಲ ಕಾರಣ ಮುಲ್ಲಾ ಮಹಮದ್ ಅಲಿರವರಿಗೆ ಈಗಾಗಲೇ ಪಹಣಿ ಅವರ ಹೆಸರಿಗೆ ಇದ್ದು, ಅವರ ಹೆಸರಿಗೆ ಹಕ್ಕು ಕೋರಿ ಹಕ್ಕು ಬದಲಾವಣೆ ಮಾಡಲು ಮನವಿ ಸಲ್ಲಿಸಿರುವುದಿಲ್ಲ, ಅವರು ನೊಂದಣಿ ಮೂಲಕ ಮಾರಾಟ ಮಾಡಿರುತ್ತಾರೆ. ಆದ್ದರಿಂದ ಪ್ರತಿವಾದಿಗಳ ಮನವಿಯನ್ನು ಪರಿಗಣಿಸಲು ಅವಕಾಶವಿಲ್ಲದ ಕಾರಣ ಮಾನ್ಯ ಉಚ್ಚನ್ಯಾಯಲಯ ಬೆಂಗಳೂರು ರವರ ರಿಟ್ ಪಿಟಿಷನ್ ನಂಬರ್ 3685/1993 ಆದೇಶದನ್ವಯ ನೊಂದಣಿ ಕ್ರಯ ಪತ್ರವನ್ನು ರದ್ದು ಗೊಳಿಸಲು ಅಥವಾ ತಿರಸ್ಕರಿಸಲು ಈ ಕಂದಾಯ ನ್ಯಾಯಲಯಕ್ಕೆ ಅಧಿಕಾರ ಇಲ್ಲದಿರುವುದರಿಂದ ಹಾಗೂ ಭೂ ಕಂದಾಯ ಕಾಯ್ದೆ ಅನ್ವಯ 1964 ಕಾಲಂ 128 ರನ್ವಯ ನೊಂದಣಿ ಕ್ರಯ ಪತ್ರದ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕಂದಾಯ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಓ ಎಸ್ ನಂಬರ್ 45/2014 ಮಾನ್ಯ ಸಿವಿಲ್ ನ್ಯಾಯಾಲಯ ಜೆ ಎಂ ಎಫ್ ಸಿ ಹೂವಿನಹಡಗಲಿ ರವರು ಮಾಡುವ ಆದೇಶಕ್ಕೊಳಪಟ್ಟು ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡ ಆದೇಶ.

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ ಹಿನ್ನೆಲೆ ಕಾರಣಗಳಿಂದಾಗಿ ನೊಂದಣಿ ಕ್ರಯಪತ್ರ ಸಂಖ್ಯೆ 2325/2014-15 ದಿನಾಂಕ 03/11/2014ರ ಪ್ರಕಾರ ವಾದಿಯಾದ ಶ್ರೀ ಹೆಚ್ ಬಸವನಗೌಡ ತಂದೆ ಗದ್ದಿಕೇರಿ ಗೌಡ್ರಸಿದ್ದಲಿಂಗಪ್ಪ ಹಡಗಲಿ ರವರು ಹೆಸರಿಗೆ ಹೂವಿನಹಡಗಲಿ ಗ್ರಾಮದ ಸರ್ವೇ ನಂಬರ 309 A/2 A/1a ವಿಸ್ತೀರ್ಣ 0.07 **ಸೆಂಟ್ಸ್** ಜಮೀನನ್ನು ಓ ಎಸ್ ನಂಬರ್ 45/2014 ಮಾನ್ಯ ಸಿವಿಲ್ ಜೆ ಎಂ ಫ್ ಸಿ ನ್ಯಾಯಲಯ ಮಾಡುವ ಆದೇಶಕ್ಕೆ ಒಳಪಟ್ಟು ಕ್ರಯ ನೊಂದಣಿ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚು ಮಾಡಿಸಿ, ದಿನಾಂಕ 26-05-2016 ಬಹಿರಂಗ ನ್ಯಾಯಲದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹೂವಿನಹಡಗಲಿ.

ಪ್ರತಿಗಳನ್ನು:

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.